ಸೃಜನಿ

SRUJANI: Indian Journal of Innovative Research and Development (SIJIRD)
Volume-4 Special Issue 1, March-April 2025, Pp. 27-33
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಬ್ರಿಟಿಷ್ ವಿರೋಧಿ ಹೋರಾಟದಲ್ಲಿ ಕಿತ್ತೂರು

**ಶಶಿಕಲ ಎ.ಎಸ್**

ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೊಮ್ಮಲೂರು, ಬೆಂಗಳೂರು

***Abstract:***

*ಕಿತ್ತೂರು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಒಂದು ಪುಟ್ಟ ಗ್ರಾಮ. ಇದು ಬ್ರಿಟಿಷ್ ವಿರುದ್ಧದ ಹೋರಾಟಗಳಲ್ಲಿ ಮೊದಲ ಸ್ಥಾನ ಪಡೆದಂತಹ ನೆಲೆ. ಕಿತ್ತೂರು ಸಣ್ಣ ಗ್ರಾಮವಾಗಿದ್ದು ಕರ್ನಾಟಕದ ಚರಿತ್ರೆಯಲ್ಲಿ ವೀರರ ನಾಡು ವೀರ ರಾಣಿ ಚೆನ್ನಮ್ಮನ ನೆಲೆ ಎಂದೇ ಪ್ರಖ್ಯಾತವಾಗಿದೆ. ಬೈಲಹೊಂಗಲ ತಾಲೂಕು ಬೆಳಗಾವಿ ಜಿಲ್ಲೆಯಲ್ಲಿದೆ. ಈ ಸ್ಥಳವನ್ನು ಮೊದಲು 'ಗೀಜಗನಹಳ್ಳಿ' ಎಂದು ಕರೆಯಲಾಗುತ್ತಿತ್ತು. 12ನೇ ಶತಮಾನದಲ್ಲಿ ಕಿತ್ತೂರು ಎಂದು ಕರೆಯಲಾಗಿದೆ. ರಾಣಿ ಚೆನ್ನಮ್ಮ ಕಿತ್ತೂರಿನಲ್ಲಿ ಆಳ್ವಿಕೆ ನಡೆಸಿದ್ದ ಇವರನ್ನು ಕಿತ್ತೂರು ರಾಣಿ ಚೆನ್ನಮ್ಮ ಎಂದು ಜನಪ್ರಿಯರಾಗಿದ್ದಾರೆ. ಪ್ರಸ್ತುತ ಲೇಖನದಲ್ಲಿ ಬ್ರಿಟಿಷ್ ವಿರೋಧಿ ಹೋರಾಟದಲ್ಲಿ ಕಿತ್ತೂರು ಗ್ರಾಮ ವಹಿಸಿದ ಪಾತ್ರವನ್ನು ಐತಿಹಾಸಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.*

***Keywords:*** *ಬ್ರಿಟಿಷ್ ವಿರೋಧಿ ಹೋರಾಟ, ಸ್ವಾತಂತ್ರ್ಯ ಹೋರಾಟ, ಬೆಳಗಾವಿ, ಕಿತ್ತೂರು, ಕಿತ್ತೂರು ರಾಣಿ ಚೆನ್ನಮ್ಮ.*

## ಪೀಠಿಕೆ

ಬ್ರಿಟಿಷ್ ಆಡಳಿತದ ವಿರುದ್ಧ ಮೊದಲು ಪ್ರತಿಭಟಿಸಿದ ಧೀರ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ. ಈಕೆ ಹುಟ್ಟಿದ್ದು ಅಕ್ಟೋಬರ್ 23, 1778 ರಂದು ಬೆಳಗಾವಿ ಜಿಲ್ಲೆಯ ಕಾಕತೀಯ ಗ್ರಾಮದಲ್ಲಿ ತಂದೆ ದೂಳಪ್ಪ ಮತ್ತು ತಾಯಿ ಪದ್ಮಾವತಿ ದಂಪತಿಗಳ ಮಗಳಾಗಿ ಜನಿಸಿದರು. ಈಕೆ ಬಾಲ್ಯದಲ್ಲಿಯೇ ಕತ್ತಿ ವರಸೆ ಮತ್ತು ಕುದುರೆ ಸವಾರಿಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದಳು. ತನ್ನ ಹದಿನೈದನೆಯ ವಯಸ್ಸಿನಲ್ಲಿ ಕಿತ್ತೂರು ದೊರೆ ಮಲ್ಲಾಸರ್ಜಾ ಅವರನ್ನು ವಿವಾಹವಾದರು. ಕಿತ್ತೂರು ಒಂದು ಪುಟ್ಟ ರಾಜ್ಯವಾಗಿತ್ತು. ಆಕಸ್ಮಿಕವಾಗಿ ತನ್ನ ಪತಿ ಮತ್ತು ಪುತ್ರ ಇಬ್ಬರೂ ಸಹ ಮರಣ ಹೊಂದುತ್ತಾರೆ. ತನ್ನ ರಾಜ್ಯವನ್ನು ರಕ್ಷಿಸುವ ಜವಬ್ದಾರಿ ಚೆನ್ನಮ್ಮನ ಮೇಲಿತ್ತು. ಆದ್ದರಿಂದ ಶಿವಲಿಂಗಪ್ಪ ಎಂಬ ಬಾಲಕನನ್ನು ದತ್ತು ತೆಗೆದುಕೊಂಡು ರಾಜ್ಯಾಡಳಿತ ಪ್ರಾರಂಭಿಸಿದಳು.[1] ಬ್ರಿಟಿಷ್ ಲಾರ್ಡ್ ಡಾಲ್‌ಹೌಸಿಯು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ಕಾನೂನನ್ನು ಬಾರತದಲ್ಲಿ ಜಾರಿಗೆ ತಂದಿದ್ದರು. ಆದ್ದರಿಂದ ಬ್ರಿಟಿಷರು ಚೆನ್ನಮ್ಮನ ದತ್ತು ಸ್ವೀಕಾರವನ್ನು ಒಪ್ಪದೇ ಪ್ರಶ್ನಿಸಿದರು. ಪರಿಣಾಮವಾಗಿ ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣರವರು ಬ್ರಿಟಿಷರ ಮೇಲೆ ಯುದ್ಧ ಸಾರಿದರು. ಯುದ್ಧದಲ್ಲಿ ರಾಣಿ ಚೆನ್ನಮ್ಮ ಸೈನಿಕರನ್ನು

[1] ಅಶ್ವತ್ಥನಾರಾಯಣ. (2021). ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ ಒಂದು ಅವಲೋಕನ. *ಇತಿಹಾಸ ದರ್ಪಣ*. ಪುಟ. 29–30

***Please cite this article as:*** ಶಶಿಕಲ, ಎ.ಎಸ್. (2025). ಬ್ರಿಟಿಷ್ ವಿರೋಧಿ ಹೋರಾಟದಲ್ಲಿ ಕಿತ್ತೂರು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(1), 27–33

ಹುರಿದುಂಬಿಸುತ್ತಾ ಬ್ರಿಟಿಷರರೊಂದಿಗೆ ಉಗ್ರ ಹೋರಾಟ ನಡೆಸಿದರು. ಈ ಯುದ್ದದಲ್ಲಿ ಬ್ರಿಟಿಷ್ ವೈಸ್‌ರಾಯ್ ಆದ ಥ್ಯಾಖರೆಯು ಯುದ್ದದಲ್ಲಿ ಕೊಲ್ಲಲ್ಪಟ್ಟನು. ಬ್ರಿಟಿಷ್ ಸೇನಾಧಿಕಾರಿಗಳಾದ ಇಲಿಯಟ್ ಮತ್ತು ಸ್ಟೀವನ್‌ರವರನ್ನು ಸೆರೆ ಹಿಡಿದರು. ಇದು ಚೆನ್ನಮ್ಮನ ಮೊದಲ ವಿಜಯವಾಗಿತ್ತು. ಆದರೆ ವಿಧಿ ಆಟವೇ ಬೇರೆಯಾಗಿತ್ತು. ಇವರು ತನ್ನವರ ಮತ್ತು ಬ್ರಿಟಿಷರ ಪಿತೂರಿ ಮತ್ತು ವಿಶ್ವಾಸದ್ರೋಹದಿಂದ ಚೆನ್ನಮ್ಮಳನ್ನು ಬ್ರಿಟಿಷರು ಸೆರೆಹಿಡಿದು ಬೈಲಹೊಂಗಲದ ಕಾರಾಗೃಹದಲ್ಲಿ ಇರಿಸಿದರು. ಕಾರಾಗೃಹದಲ್ಲಿ ಕೊರಗಿ 1829ರಲ್ಲಿ ಭಾರತದ ಮೊದಲ ಮಹಿಳಾ ಹೋರಾಟಗಾರ್ತಿಯಾದ ಬ್ರಿಟಿಷರ ಎದುರು ನಿಂತು ತನ್ನ ಶೌರ್ಯ ಸಾಹಸದಿಂದ ಶತೃಗಳ ಹುಟ್ಟುಡಗಿಸಿದ ಚೆನ್ನಮ್ಮ ಕೊನೆ ಉಸಿರೆಳೆದಳು.

**ಕಿತ್ತೂರಿನ ಸ್ವಾತಂತ್ರ್ಯ ಹೋರಾಟಗಾರರು**

ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಅಪ್ಪ ಸಾಹೇಬ ಶಾಂತಿನಾಥ ಇಂಗಾಳೆ, ಅಹಪ್ಪ ಮಾರಿಹಾಳ, ಗುರುಭಟ್ಟ, ಜೋಷಿ ರಾಮರಾವ್ ಡಾವಳ, ದೇವೇಂದ್ರಪ್ಪ ವಗ್ಗರೈ, ದೇವೇಂದ್ರಪ್ಪ ಬತ್ತನಾಡ, ಕುಬೇರಗೌಡ ಮಲ್ಲನಗೌಡ, ಮರಿಕಲ್ಲಪ್ಪ ಮಲ್ಲಸೆಟ್ಟಿ, ವೀರಸಂಗಪ್ಪ ತಿಮ್ಮಾಪುರ, ದೇವೇಂದ್ರಪ್ಪ ಕೆಂಚಣ್ಣನವರ, ನಾಗಪ್ಪ ಹಂಚಿಮನೆ, ಫಕೀರಪ್ಪ ನಾಯ್ಕರ, ಈರಯ್ಯಾ ಭಾನಿ, ಬಿಷ್ಟಪ್ಪ ಕುಬೇರಪ್ಪ ಮಂಡೇದ ಮುಂತಾದ ಮಹನೀಯರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕಿತ್ತೂರು ಗ್ರಾಮದವರಾಗಿದ್ದಾರೆ.

**ತಿಲಕರ ಕಾಲಘಟ್ಟ**

1920ರಲ್ಲಿ ಗಾಂಧೀಜಿಯವರು ಅಸಹಕಾರ ಚಳವಳಿಗೆ ಕರೆ ನೀಡಿದಾಗ ಇಡೀ ದೇಶವೇ ಇವರ ಕರೆಗೆ ಸ್ಪಂಧಿಸಿತು. ಇದಕ್ಕಿಂತ ಪೂರ್ವದಲ್ಲಿ ಬಾಲಗಂಗಾಧರನಾಥ ತಿಲಕರ ಬರೆಹ, ಭಾಷಣಗಳು ಈ ಭಾಗದ ಜನತೆಯ ಮೇಲೆ ಸಾಕಷ್ಟು ಪ್ರಭಾವ ಬೀರಿದ್ದವು. ತಿಲಕರು ಭಾರತೀಯರಲ್ಲಿ ರಾಷ್ಟ್ರೀಯತೆಯ ಜಾಗೃತಿಯನ್ನು ತರಲು ಸ್ವದೇಶಿ, ವಿದೇಶಿ ಬಹಿಷ್ಕಾರ, ಸ್ವರಾಜ್ಯ ಮತ್ತು ರಾಷ್ಟ್ರೀಯ ಶಿಕ್ಷಣ ಎಂಬ ನಾಲ್ಕು ಸೂತ್ರಗಳನ್ನು ಪ್ರಚುರಪಡಿಸಿದರು. ಭಾರತದಿಂದ ಬ್ರಿಟಿಷರನ್ನು ಕಾಲ್ತೆಗಿಸಬೇಕಾದರೆ ಭಾರತೀಯರಲ್ಲಿ ಸ್ವದೇಶಿ ಭಾವನೆ ಬೆಳೆದು ವಿದೇಶಿ ವಸ್ತುಗಳನ್ನು ಬಹಿಷ್ಕರಿಸಬೇಕು. ಇದರಿಂದ ಬ್ರಿಟಿಷರ ಆರ್ಥಿಕತೆಗೆ ಹೊಡೆತ ಬೀಳುತ್ತದೆ ಎಂದು ಅಭಿಪ್ರಾಯಪಟ್ಟವರು. ಆದ್ದರಿಂದ ಬೆಳಗಾವಿ ಜಿಲ್ಲೆಯಾದ್ಯಂತ ಸ್ವದೇಶಿ ವಸ್ತುಗಳನ್ನು ಪ್ರೋತ್ಸಾಹಿಸಲು ಸ್ವದೇಶಿ ಚಳುವಳಿಯನ್ನು ನಡೆಸಿದರು. ಕಿತ್ತೂರಿನ ಪುಣೇಕರ ನರಸಿಂಹಚಾರ್ಯ, ನಾರಾಯಣಾಚಾರ್ಯ ಕಂಚಿ, ಕೃಷ್ಣಚಾರ್ಯ ಕಂಚಿ ರಂಗಣ್ಣ ನಾಯಕ ಮಹಾಬಲೇಶ್ವರಪ್ಪ ಮುತ್ತೂರ ಮತ್ತಿತ್ತರರು. ಹಳ್ಳಿ–ಹಳ್ಳಿಗೂ ಹೋಗಿ ಸ್ವದೇಶಿ ವಸ್ತುಗಳ ಪ್ರಚಾರ ಕಾರ್ಯರಂಭಿಸಿದರು.

**ಕಿತ್ತೂರಿನಲ್ಲಿ ಸ್ವಾತಂತ್ರ್ಯ ಚಳುವಳಿ (ಗಾಂಧಿ ಕಾಲಘಟ್ಟ)**

ತಿಲಕರ ನಿಧನದ ನಂತರ ಗಾಂದೀಜಿಯವರ ಕಾಲಘಟ್ಟದಲ್ಲಿ ಸ್ವದೇಶಿ ವಸ್ತುಗಳ ಪ್ರಚಾರಕಾರ್ಯ ಚಟುವಟಿಕೆಗಳು ಮರುಕಳುಹಿಸಿದವು. ಗಾಂಧೀಜಿಯವರು ಅಸಹಕಾರ ಚಳವಳಿಗೆ ಕರೆ ನೀಡಿದರು. ಕಿತ್ತೂರಿನಲ್ಲಿ ಖಾದಿ ಪ್ರಚಾರ, ವಿದೇಶಿ ವಸ್ತುಗಳ ಬಹಿಷ್ಕಾರ, ಮದ್ಯದಂಗಂಡಿಗಳ ಪಿಕೆಟಿಂಗ್ ಅಂತಹ ಕಾರ್ಯಕ್ರಮಗಳು ಜರುಗಿದವು. 1924ರಲ್ಲಿ ಅಖಿಲ ಭಾರತ ಕಾಂಗ್ರೆಸ್‌ನ 39ನೇ ಅಧಿವೇಶನ ನಡೆದಾಗ ಕಿತ್ತೂರಿನಿಂದ ಕಾಂಗ್ರೆಸ್ ಕಾರ್ಯಕರ್ತರು ಪಾಲ್ಗೊಂಡಿದ್ದರು.

**ನಾಗರಿಕಕಾನೂನುಭಂಗ ಚಳವಳಿ**

ತದನಂತರ ಗಾಂಧೀಜಿಯವರು ನಾಗರಿಕ ಕಾನೂನುಭಂಗ ಚಳವಳಿಯನ್ನು 1930ರಲ್ಲಿ ಪ್ರಾರಂಭಿಸಿದರು. ಈ ಚಳುವಳಿಯ ಪ್ರಯುಕ್ತ, ಉಪ್ಪಿನ ಸತ್ಯಾಗ್ರಹ, ಕರನಿರಾಕರಣ ಸತ್ಯಾಗ್ರಹ,

ಹುಲ್ಲುಬಿನ್ನಿ ಅರಣ್ಯ ಸತ್ಯಾಗ್ರಹದಂತಹ ಚಟುವಟಿಕೆಗಳನ್ನು ಕಾಣಬಹುದು. ಈ ಸಂದರ್ಭದಲ್ಲಿ ದಿನಾಂಕ 16–02–1930 ರಂದು ಗಂಗಾಧರರಾವ್ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಸೋಮವಾರಪೇಟೆಯಲ್ಲಿ ಸಂಘಟಿಸಲಾಗಿತ್ತು. ರಾಜಗೋಪಾಲಚಾರ್ಯ, ಎನ್.ಎಸ್.ಹರ್ಡೀಕರ್ ಭಾಷಣ ಮಾಡಿ ಜನತೆಗೆ ಚಳವಳಿಯಲ್ಲಿ ಭಾಗವಹಿಸಲು ಕರೆ ನೀಡಿದರು. ಈ ಭಾಷಣದಿಂದ ಸ್ಫೂರ್ತಿ ಪಡೆದ ಶಾಂತಿನಾಥ ಇಂಗಳೆ, ನೇಮಿಚಂದ್ರ ಮೊನಹಳ್ಳಿ ಇವರು ದಿನಾಂಕ : 13–07–1930 ರಂದು 'ಯುದ್ಧ ಮಂಡಳ' ಎಂಬ ಯುವಕ ಸಂಘವನ್ನು ಪ್ರಾರಂಭಿಸಿದರು[2]. ಇಂಗಳೆಯವರು ಸಾರ್ವಜನಿಕ ಭಾಷಣ ಮಾಡಿದ್ದರಿಂದ ಅವರನ್ನು ದಸ್ತಗಿರಿ ಮಾಡಿ ಶಿಕ್ಷೆಯನ್ನು ವಿಧಿಸಿದರು. ಪರಿಣಾಮವಾಗಿ ತೆಗೋಡಹಳ್ಳಿಯಲ್ಲಿ ಕಾರ್ಯಕರ್ತರು ರಾಟೆಯನ್ನು ಹಿಡಿದು ಪ್ರತಿಭಟಿಸಿದರು. ಸ್ವಾತಂತ್ರ್ಯ ಸಪ್ತಾಹವನ್ನು ಆಚರಿಸಿದರು. ಹೀಗೆ ತೆಗೋಡಹಳ್ಳಿ, ಕಿತ್ತೂರಿನಲ್ಲಿ ಪ್ರತಿನಿತ್ಯ ಪ್ರಭಾತಪೇರಿ, ರಾಷ್ಟ್ರೀಯ ನೀತಿಗಳ ಗಾಯನದಂತಹ ಕಾರ್ಯಕ್ರಮಗಳು ನಡೆಯುತ್ತಿದ್ದವು.

ಹೆಬ್ಬಾಳದ ವಿಠಲ ನರಸಿಂಹ ದೇಶಪಾಂಡೆ ಅವರು 'ವಿ.ಎನ್.ದೇಶಪಾಂಡೆ ಅಂಡೆ ಕೊ' ಎಂಬ ಸ್ವದೇಶಿ ವಸ್ತ್ರದ ಅಂಗಡಿಯನ್ನು ತೆಗೆದರು. ಇಲ್ಲೇ ನೂಲುವ ಮಗ್ಗಗಳನ್ನು ಹಾಕಿ ಖಾದಿಯಿಂದ ನೂಲು ತೆಗೆದು ದೇಶದಲ್ಲಿ ನಡೆಯುವ ಸ್ವದೇಶಿ ವಸ್ತು ಪ್ರದರ್ಶನಗಳಿಗೆ ಕಳುಹಿಸುತ್ತಿದ್ದರು. ಕಿತ್ತೂರಿನ ಯುವಕರಾದ ನರಸಿಂಹಚಾರ್ಯ, ಗಿರಿಭಟ್ಟರ, ಗುರುಮಧ್ವಾಚಾರ್ಯ, ಅಗಳಗಟ್ಟರವರು ಸ್ವದೇಶಿ ವಸ್ತುಗಳನ್ನು ಬಳಸಲು ಪ್ರಚಾರ ಮಾಡಿದರು. ಈ ಭಾಗದಲ್ಲಿ 1906–1918ರವರೆಗೂ ಈ ರೀತಿಯ ಚಳವಳಿಯ ಚಟುವಟಿಕೆಗಳು ಮುಂದುವರಿದವು.

**ಅರಣ್ಯ ಸತ್ಯಾಗ್ರಹ**

ಕಿತ್ತೂರಿನಲ್ಲಿ ಸೆಂದಿ ಗಿಡ ಕಡಿಯುವ, ಸೆಂದಿಕಪಾಲಿ ಹರಿಯುವ ಚಟುವಟಿಕೆಗಳು ಪ್ರಾರಂಭವಾದವು. ರಾಮಪುರ, ಸವಟಿಗೆ, ಪರಸಹಟ್ಟಿಯಲ್ಲಿ ಸೆಂದಿಗಿಡ ಕಡಿಯುತ್ತಿರುವಾಗ ಅಧಿಕಾರಿಗಳು ಬಂದು ಅಡ್ಡಗಟ್ಟಿದರು. ಆಗ ಅವರ ಕೈಯಿಂದ ಬಂದೂಕನ್ನು ಸತ್ಯಾಗ್ರಹಿಗಳು ಕಸಿದುಕೊಂಡರು. ಇದೇ ರೀತಿಯ ಚಟುವಟಿಕೆಗಳು ಮುಂದುವರಿಯುತ್ತಿದ್ದವು. ಅಂದಿನ ವಿಜಯ ಪತ್ರಿಕೆಯು ದಿನಾಂಕ 20–01–1932 ರಂದು ಕಿತ್ತೂರು ಜನರ ಮೇಲೆ ಲೆಕ್ಕವಿಲ್ಲದಷ್ಟು ಆರೋಪಗಳು ಎಂಬ ಶೀರ್ಷಿಕೆಯಲ್ಲಿ ಸರ್ಕಾರದವರಿಗೆ ಯಾರು ಸಹಾಯ ಮಾಡಬಾರದೆಂದು ಹೇಳಿದರು.[3] ಸಬ್‌ಇನ್ಸ್‌ಪೆಕ್ಟರ್ ಆಜ್ಞೆಗಳನ್ನು ಸ್ವೀಕರಿಸಲಿಲ್ಲ ಎಂದು, ಸೆಂದಿ ಗಿಡಗಳನ್ನು ಕಡಿದು ಲಕ್ಷಾಂತರ ರೂಪಾಯಿಗಳನ್ನು ಲುಕ್ಸಾನ ಮಾಡಿದರೆಂದು, ಆಯುಧಗಳಿಂದ ಬೆದರಿಸಿ, ಸೆಂದಿಗಿಡ ಕಾಯುವವರಿಂದ ಕಂಬಳಿ, ಶಾಲ್ಮಿರಿ ಲಾಟಿನ್, ತಟ್ಟೆ ಹರಕ ಚಾಪೆಯನ್ನು ಕಳುವು ಮಾಡಿದರೆಂದು ಕಾವಲುಗಾರರನ್ನು ಕಟ್ಟಿ ಬಡಿದು, ಅವರಿಂದ ಬಂದೂಕನ್ನು ಒಯ್ದರೆಂದು, ಪಂಚನಾಮಗೆ ಬರಲಿಲ್ಲವೆಂದು, ಜನರ ಮೆರವಣಿಗೆಯಲ್ಲಿ ಬ್ಯಾಂಡ್ ಬಾರಿಸಿದರೆಂದು, ಕುದುರೆಯ ಮೇಲಿರಿದ್ದ ಕಪಾಲಿಯನ್ನು ಹರಿದು ಹಾಕಿದರೆಂದು, ಸರ್ಕಾರವು ಸತ್ಯಾಗ್ರಹಿಗಳ ಮೇಲೆ ಸುಳ್ಳು ಆರೋಪಗಳನ್ನೊರಸಿ 48 ಮಂದಿಗೆ ಶಿಕ್ಷೆಯನ್ನು ವಿಧಿಸಿತು ಎಂದು ಪ್ರಕಟಿಸಿತು.

ಇದೇ ರೀತಿ ಕಿತ್ತೂರಿನಲ್ಲಿ ಅರಣ್ಯ ಸತ್ಯಾಗ್ರಹ ನಡೆಯುತ್ತಿರಬೇಕಾದರೆ ಕಿತ್ತೂರಿನ ಸಮೀಪವಿರುವ ತಿಗಡಹಳ್ಳಿಯಲ್ಲಿ ದೇವೇಂದ್ರ ಬಸ್ತವಾಡ ಮತ್ತು ಇತರೆ ವಿದ್ಯಾರ್ಥಿಗಳು ಪ್ರಭಾತ್ ಫೆರಿಯನ್ನು ನಡೆಸಿದವು.

[2] ಸೂರ್ಯನಾಥಕಾಮತ್. (1998). *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ–1.* ಪುಟ–1082–1083

[3] ವಿಜಯ ಪತ್ರಿಕೆಯು ದಿನಾಂಕ 20–01–1932

ದೇವರ ಶೀಗಿ ಹಳ್ಳಿಯಿಂದ ಪ್ರತಿದಿನ ತರುತ್ತಿದ್ದ ಸೇಂದಿ ಕಪಾಲಿಗಳನ್ನು ಹರಿದು ನಾಶ ಮಾಡಿದರು.[4] ಹೀಗೆ ಸೇಂದಿ ಕಪಾಲಿಗಳನ್ನು ಹರಿಯುವ, ಸೇಂದಿ ಡಬ್ಬಿಗಳನ್ನು ನಾಶ ಮಾಡುವಂತಹ ಪಾನ ನಿರೋಧ ಚಟುವಟಿಕೆಗಳು ನಡೆದು ವಿದ್ಯಾರ್ಥಿಗಳು ಪ್ರಮುಖ ಪಾತ್ರ ವಹಿಸಿದರು.

**ಕೋಷ್ಟಕ 1: ಶಿಕ್ಷೆಗೆ ಒಳಗಾದವರ ಪಟ್ಟಿ**

| |
|---|
| ಶ್ರೀನೇಮಿಚಂದ್ರ ಮುನವಳ್ಳಿ |
| ನೇಮಿನಾಥ ಇಂಗಳೆ |
| ಶಾಂತಿನಾಥ ಇಂಗಳೆ |
| ಅರ್ಜುನ ಮುತ್ತಿಗಿ |
| ಶ್ರೀ ಗುರುನಾಥ ಜೋಶಿ |
| ರಂಗನಾಥ ಮೊಸಳ್ಳಿ |
| ರಾಮರಾಯರು ಡವಳೆ |
| ರಾಮುನಾಯಕ |
| ಹವಣೊಮಿಟ್ಟಮನಿ |
| ಭಂಡಾಚಾರ್ಯಅತ್ರೆ |
| ನರಸಿಂಹ ಗಿರಿಭಟ್ಟನವರ |
| ಬಾಹುಪಾಗದ |
| ಭೀಮಪ್ಪ ಶಿಂಟಿ |
| ಹುಸೇನ ಸಾಬ್ ಹರಭ |
| ಗೌಸೂ ಸಾಬ ವಂಗಾಲ |
| ತಿಮ್ಮಪ್ಪ ವಡ್ಡರ |
| ಹನುಮಂತಉಮರ್ಜಿ |
| ಯಂಕನಭಟ್ಟ ಜೋಶಿ |
| ಶ್ರೀ ಶಂಕರ ಪದಕಿ |
| ಢೋಡಿ ಭಾ ಪದಕಿ |
| ರಾಮಚಂದ್ರಚೌವ್ಹಾಣ |
| ಗಣೇಶಖಾನಾಪುರ |
| ಗುರುಸಿದ್ದಯ್ಯ ತಿಮ್ಮಾಪುರ |
| ಭೀಮಪ್ಪಎಲಿಗಾರ |
| ನಿಂಭೋಜಿ ಸಾಹುಕಿ |
| ಸಂಗಣ ಬಸಪ್ಪ ಶರನವರ |
| ವೀರಭದ್ರ ಮಾರಿಹಾಳ |
| ಚಂದ್ರಶೇಖರ ವಸ್ತ್ರದ |
| ನಾರಾಯಣ ಬುಲೆಬುಲೆ |
| ಇಮಾಮ್ ಸಾಬ್ ಬಸಾಪುರ |
| ಪತ್ತೇ ಸಾಬ ಪಿಂಜಾರ |
| ರಂಗಪ್ಪನಾಯಕ |
| ಶಂಕರಗುರುಚನ್ನನವರ |
| ನಾನಾ ಸಾಹೇಭ ಸರಧರ |
| ಚನ್ನಯ್ಯ ವಿಭೂತಿ |
| ಶಿವಲಿಂಗಪ್ಪ ಹೂಗಾರ |
| ನಿಂಗಪ್ಪ ಕಲಮಟ |
| ಬೈಲಪ್ಪ ಬಳಿಗಾರ |
| ನಾಗಪ್ಪ ಹಣಗಿ |
| ಕಲ್ಲಪ್ಪ ಹಣಗಿ |
| ಶಂಕರಪ್ಪ ಮೊರಾಕರ |
| ರುದ್ರಪ್ಪ ಹೊಂಗಳ |
| ಜೋತ್ಯಪ್ಪ ಸರ್ವೇದ |
| ದೇವರಾವ್ ಪತಂಗಿ |
| ಗುರುನಾಥ ಫತ್ತಾರ |
| ಹುಸೇನಿ ಸಾಬ ಬೇಪಾರಿ |
| ಶೆಟ್ಟಪ್ಪ ವಡ್ಡರ |
| ನಾಮದೇವ |

**ಮೂಲ:** ಕಿತ್ತೂರು ಕಾಂಗ್ರೆಸ್ ವರದಿ–1931

ಕಿತ್ತೂರಿನಲ್ಲಿ ನೇಮಿಚಂದ್ರಪ್ಪ ಮುನಳ್ಳಿ ಮತ್ತು ಶಾಂತಿನಾಥ ಇಂಗಳೆಯರ್ 1930ರಲ್ಲಿ ಸತ್ಯಾಗ್ರಹ ಯುದ್ದ ಮಂಡಳಿಯನ್ನು ಸ್ಥಾಪಿಸಿ, ಅಂದು ಭಾಷಣವನ್ನು ಮಾಡಿದರು. ಪರಿಣಾಮವಾಗಿ ಶಾಂತಿನಾಂಥ ಇಂಗಳೆಯರಿಗೆ ಶಿಕ್ಷೆ ನೀಡಲಾಯಿತು. ಇದನ್ನು ಪ್ರತಿಭಟಿಸಿ, ಊರಿನ ವಿದ್ಯಾರ್ಥಿಗಳು, ಯುವಕರು ರಾಟೆಯನ್ನು ಹಿಡಿದು ಮೆರವಣಿಗೆ ಮಾಡುವುದರ ಮೂಲಕ ಪ್ರತಿಭಟಿಸಿದರು. ದಿನಾಂಕ:27–07–1930 ರಿಂದಕಾಂಗ್ರೆಸ್ ಸಪ್ತಾಹವನ್ನು ಆಚರಿಸಿ ಕಿತ್ತೂರಿನಲ್ಲಿ ಸೇಂದಿ ಅಂಗಡಿಯ ಮುಂದೆ ಪಿಕೆಟಿಂಗ್ ನಡೆಸಿದರು. ದಿನಾಂಕ:30–07–1930 ರಂದು ರಾಮಚಂದ್ರ ಡಾವಳೆ, ಹನುಮಂತ ಮಿಟ್ಟಿಮನಿ, ರಂಗನಾಥ ಮೊಸಳಿ, ಗುರಪ್ಪ ಫತ್ತಾರ, ಗುರುಸಿದ್ದಯ್ಯ

[4] ನಾಗರತ್ನಮ್ಮ. (2009). *ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರಿಕ ಕಾನೂನುಭಂಗ ಚಳವಳಿ.* ಪುಟ. 153

ತಿಮ್ಮಾಪುರ, ಶ್ಯಾಮಾಚಾರ್ಯ ಗಿರಿಭಟ್ಟನವರನ್ನು ಬಂಧಿಸಿ ಬೈಲಹೊಂಗಲದಲ್ಲಿ ವಿಚಾರ ಮಾಡಿ ಇವರಲ್ಲಿ ಕೆಲವರಿಗೆ ಮೂರು ವಾರ ಶಿಕ್ಷೆ, 20 ರೂಪಾಯಿದಂಡವನ್ನು ವಿಧಿಸಿದರು.[5]

**ಕಿತ್ತೂರಿನಲ್ಲಿ ಕ್ವಿಟ್ ಇಂಡಿಯಾ ಚಳವಳಿ**

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ 1942ರಲ್ಲಿ ಬ್ರಿಟಿಷರ ವಿರುದ್ಧ ನಡೆದ ಕ್ವಿಟ್‌ಇಂಡಿಯಾ ಕೊನೆಯ ಚಳುವಳಿಯಾಗಿತ್ತು. ಕ್ರಿಪ್ಸ್ ಮಿಷನ್ ವರದಿಯ ನಂತರ ಭಾರತೀಯರು ಬ್ರಿಟಿಷರ ವಿರುದ್ಧ ಪ್ರತಿಭಟನೆಗೆ ಇಳಿದರು. 1942 ಆಗಸ್ಟ್ 8 ರಂದು ಗಾಂಧೀಜಿ, ಜನವಹರ್ ಲಾಲ್ ನೆಹರೂ, ಸರ್ದಾರ್ ವಲ್ಲಭಾಯ್ ಪಟೇಲ್ ಇನ್ನಿತರೆ ನಾಯಕರು ಬೊಂಬಾಯಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯಲ್ಲಿ ಭಾರತ ಬಿಟ್ಟು ತೊಲಗಿ (ಕ್ವಿಟ್ ಇಂಡಿಯಾ) ನಿರ್ಣಯವನ್ನುತೆಗೆದುಕೊಂಡರು. ಗಾಂಧಿಜಿಯವರು ಭಾರತದ ಪ್ರಜೆಗಳಿಗೆ ಮಾಡು ಇಲ್ಲವೇ ಮಡಿ ಎಂದು ಕರೆ ನೀಡಿದರು. ತಕ್ಷಣವೇ ಬಿಟಿಷ್ ಸರ್ಕಾರ ಗಾಂಧಿ ಮತ್ತು ಇತರೆ ರಾಷ್ಟ್ರೀಯ ನಾಯಕರನ್ನು ದಸ್ತಗಿರಿ ಮಾಡಿ ರಾಷ್ಟ್ರೀಯ ಕಾಂಗ್ರೆಸ್ ಶಾಖೆಗಳನ್ನು ಕಾನೂನು ಬಾಹಿರವೆಂದು ಘೋಷಿಸಿತು. ಹಾಗೂ ಸಾರ್ವಜನಿಕ ಸಭೆ–ಸಮಾರಂಭ, ಮೆರವಣಿಗೆ, ಧ್ವಜಾರೋಹಣ ಇಂತಹ ಚಟುವಟಿಕೆಗಳ ಮೇಲೆ ನಿರ್ಬಂಧ ಹೇರಿತು. ಇಡೀ ದೇಶದ ಜನತೆ ಸರ್ಕಾರದ ಈ ಕೃತ್ಯಗಳಿಂದ ಬೇಸತ್ತು ಹಾಗೂ ಗಾಂಧೀಜಿಯವರ ಕರೆಯನ್ನು ಗೌರವಿಸಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದರು.

ಈ ಹಿನ್ನಲೆಯಲ್ಲಿ ಕರ್ನಾಟಕದ ಬೆಳಗಾವಿಯ ಜಿಲ್ಲೆಯ ಬೈಲಹೊಂಗಲ, ಕಿತ್ತೂರು, ಸವದತ್ತಿ, ಪಾಚ್ಚಾಪುರ, ಹುಕ್ಕೇರಿ, ಸಂಪಿಗಾವಿ, ನಿಪ್ಪಣಿ, ನಂದಗಡ, ಅಕ್ಕ–ತಂಗಿಯ ಹಳ್ಳ, ಗೋಕಾಕ, ತಿಗುಡಳ್ಳಿ ಇನ್ನಿತರ ಸ್ಥಳಗಳಲ್ಲಿ ತೀವ್ರವಾಗಿ ಸಂಭವಿಸಿದವು. ಆಗಸ್ಟ್ 9 ರಂದು ಗಾಂಧೀಜಿಯವರು ಕ್ವಿಟ್ ಇಂಡಿಯಾ ಡು ಆರ್ ಡೈ ಎಂಬ ಘೋಷಣೆಗಳಿಗೆ ಕರ್ನಾಟಕದ ಬೆಳಗಾವಿಯ ಜಿಲ್ಲೆಯ ಕಿತ್ತೂರು ಹೊರತಾಗಿರಲಿಲ್ಲ. ಒಂದು ಪುಟ್ಟ ಗ್ರಾಮವಾದ ಕಿತ್ತೂರು ಸಹ ಗಾಂಧೀಜಿಯವರ ಕರೆಗೆ ಸ್ಪಂದಿಸಿತು. ಸರ್ಕಾರಿ ಕಛೇರಿಗಳ ಮೇಲೆ ಧ್ವಜಾರೋಹಣ ಸಭೆ ಮೆರವಣಿಗೆಗಳನ್ನು ನಡೆಸುವುದು. ಕಛೇರಿ, ಶಾಲಾ–ಕಾಲೇಜುಗಳ ಪಿಕೆಟಿಂಗ್ ವಿದೇಶಿ ವಸ್ತ್ರದಹನ, ವಿದೇಶಿ ವಸ್ತುಗಳ ಬಹಿಷ್ಕಾರ ಸರ್ಕಾರಿ ಕಛೇರಿಗಳ ಮೇಲೆ ದಾಳಿ ನಡೆಸಿ ದಾಖಲೆ ಪತ್ರಗಳನ್ನು ಅಗ್ನಿಗೆ ಆಹುತಿ ಮಾಡುವ ಚಟುವಟಿಕೆಗಳು ಮತ್ತು ಸರ್ಕಾರದ ಆಡಳಿತ ನೀತಿಯನ್ನು ಖಂಡಿಸಿ ಕರಪತ್ರಗಳನ್ನು ಹಂಚುವ ಸರ್ವೇ ಸಾಮಾನ್ಯವಾದ ಕಾರ್ಯಕ್ರಮಗಳಾಗಿದ್ದವು. ಕಿತ್ತೂರಿನಲ್ಲಿ ಫೌಜುಧಾರ ಕಛೇರಿ ಇತ್ತು. ಇಲ್ಲಿನ ದಪ್ತರ(ಸರ್ಕಾರಿದಾಖಲೆ)ಗಳನ್ನು ಕಛೇರಿಯ ಹತ್ತಿರದಲ್ಲಿದ್ದ ದೇಶಪಾಂಡೆರವರ ಮನೆಯಲ್ಲಿ, ತಿಹಡೋಳ್ಳಿ, ದೇಗಲೊಳ್ಳಿ, ದೇವರ ಶೀಗೇಹಳ್ಳಿ, ಬೈಲೂರು ಬೋಗೂರ, ಗೋಶಾನಹಟ್ಟಿ, ಮ್ಯಾಸಗನಹಟ್ಟಿ, ಕರಿಕಟ್ಟಿ, ಹೆಮ್ಮನಕಟ್ಟಿ, ಹುಲಿಕೊತ್ತಲ ಈ ಗ್ರಾಮಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಇಡಲಾಗುತ್ತಿತ್ತು. ಶ್ರೀಗುರುಭಟ್ಟ ಜೋಷಿ, ಜಗದೇವಪ್ಪ ದುಗ್ಗಾಣಿ ಮತ್ತು ಶಿವಪ್ಪ ಮೇಲಶೆಟ್ಟಿ ಇವರು ಗ್ರಾಮದ ಇತರೆ ಕಾರ್ಯಕರ್ತರನ್ನು ಸಂಘಟಿಸಿಕೊಂಡು ದೇಶಪಾಂಡೆರವರ ಮನೆಯಲ್ಲಿರುವ ದಪ್ತರಗಳನ್ನು ತೆಗೆದುಕೊಂಡು ಬಂದು ಸುಟ್ಟುಹಾಕಿದರು.

ಈ ಕ್ವಿಟ್‌ಇಂಡಿಯಾ ಚಳುವಳಿಯ ಸಂದರ್ಭದಲ್ಲಿಕಿತ್ತೂರಿನ ಸ್ವಾತಂತ್ರ್ಯ ಹೋರಾಟಗಾರರು ಕಿತ್ತೂರು ಭಾಗದ ತಿಗೋಡಳ್ಳಿ, ದೇಗಾವ, ಅಂಬಡಗಟ್ಟಿ ಮತ್ತು ಕಿತ್ತೂರು ಗ್ರಾಮಗಳಲ್ಲಿ ಬಹಳಷ್ಟು ಚುರುಕಾಗಿ ಕಾರ್ಯ ನಿರ್ವಹಿಸಿದರು. ಕಿತ್ತೂರಿನ ಫೌಜುಧಾರ ಕಛೇರಿಯಲ್ಲಿ ತಿಗೋಡಳ್ಳಿ, ದೇಗಳ್ಳಿ, ದೇವರಶೀಗಿಹಳ್ಳಿ, ಬೈಲೂರು, ಗೋಶನಹಟ್ಟಿ,

[5] ಸೂರ್ಯನಾಥಕಾಮತ್. (1998). *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು–ಸಂಪುಟ–I.* ಪುಟ. 1082–1083

ಕರಿಕಟ್ಟಿಹೆಮ್ಮಿನಕಟ್ಟಿ, ಬುರನಿಕಿ, ಮಾರ್ಗನಕೊಪ್ಪ, ಹುಲಿಕೊಪ್ಪಲ ಮುಂತಾದ ಗ್ರಾಮಗಳ ದಾಖಲೆ ಪತ್ರಗಳನ್ನು ದೇಶಪಾಂಡೆಯವರ ಮನೆಯಲ್ಲಿಟ್ಟು ಪೊಲೀಸರನ್ನು ರಕ್ಷಣೆಗಾಗಿ ಕಾವಲಿಡಲಾಗಿತ್ತು. ಈ ವಿಷಯವನ್ನು ತಿಳಿದ ಶ್ರೀಗುರುಭಟ್ಟ ಜೋಷಿ, ಜಗದೇವಪ್ಪ ದುಗ್ಗಾಣಿ ಮತ್ತು ಶಿವಪ್ಪ ಮಲ್ಲಶೆಟ್ಟಿ ಇನ್ನಿತರ ಹೋರಾಟಗಾರರು ಪೋಲಿಸರ ಕಣ್ಣು ತಪ್ಪಿಸಿ ದೇಶಪಾಂಡೆಯವರ ಮನೆ ಕೀಲಿ ಮುರಿದು ದೇಶಪಾಂಡೆಯವರ ಬಾಯಲ್ಲಿ ಬಟ್ಟೆತುರುಕಿ ಹೆದರಿಸಿ, ಬೆದರಿಸಿ ದಾಖಲೆ ಪತ್ರಗಳನ್ನು ತೆಗೆದುಕೊಂಡು ಹೋಗಿ ಅಗ್ನಿಗೆ ಆಹುತಿ ಮಾಡಿದರು.

ಈ ಚಳುವಳಿಯ ಸಂದರ್ಭದಲ್ಲಿ ಕಿತ್ತೂರಿನ ಹೋರಾಟಗಾರರು ಕೋಗಿಲಗೆರೆ ರೈಲ್ವೆ ಸ್ಟೇಷನ್ನಿನ ಹಳಿಗಳನ್ನು ಕೆಡವಿ ಹಾಕಿದರು. ನಾಗರಗಾವಿ ರೇಂಜ್ ಅಧಿಕಾರಿಗಳ ವೈಯಕ್ತಿಕ ವಸ್ತುಗಳಿಗೆ ಬೆಂಕಿ ಹಚ್ಚಿದರು. ಬಳಿಕ ಟೆಲಿಪೋನ್ ತಂತಿಗಳನ್ನು ಕಿತ್ತು ಹಾಕಿದರು. ಜಗದೇವಪ್ಪ ದುಗ್ಗಾಣಿ, ಶಿವಪ್ಪ ಮಲಶೆಟ್ಟಿ, ವೀರಸಂಗಪ್ಪ, ಲಿಂಗಪ್ಪ ಚಿಕ್ಕಣ್ಣನವರ, ಲಕ್ಕಪ್ಪ ಕಸಗಳಗಿ ಇವರು ತಾವರೆಕೆರೆಯ ರೈಲ್ವೆ ಸ್ಟೇಷನ್ನಿಗೆ ಬೆಂಕಿ ಹಾಕಿದರು. ಕಿತ್ತೂರಿನ ಗ್ರಾಮವಾದ ತಿಗಡೊಳ್ಳಿಯ ಕುಬೇರಜಿ ಕಲಗೌಡ ಅವರು ಹೊನ್ನಾಪುರ ಗ್ರಾಮದ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಥಾರ್ನಹಿಲ್ ಸಾಹೇಬರು ಸಿಬ್ಬಂದಿಯೊಂದಿಗೆ ತಿಗಡೊಳ್ಳಿಗೆ ಬರುವ ವಿಷಯವನ್ನು ತಿಗಡೊಳ್ಳಿಯ ಕಾರ್ಯಕರ್ತರಿಗೆ ತಿಳಿಸಿದರು. ಥಾರ್ನಹಿಲ್ ಸಾಹೇಬರು ಜೀಪ್ ಗಾಡಿಯನ್ನು ಅಲ್ಲೇ ಬಿಟ್ಟು ಹೋಗಿದ್ದರು. ಇವರು ಈ ಜೀಪ್‌ಗಾಡಿಯನ್ನು ಸುಡಲು ಒಂದು ಯೋಜನೆಯನ್ನು ಸಿದ್ದಪಡಿಸಿದರು. ದೇವೇಂದ್ರಪ್ಪ ಮತ್ತು ನಾಗಪ್ಪನವರು ಜೀಪ್ ಗಾಡಿಯ ಡ್ರೈವರ್ ಹತ್ತಿರ ಬಂದು ಅವರಿಗೆ ಕಬ್ಬು ತಿನ್ನಲು ಕೊಟ್ಟು ಮಾತನಾಡಿಸುತ್ತಿದ್ದರು. ದೇವೇಂದ್ರಪ್ಪ ಕಂಚಣ್ಣ ಮತ್ತು ನಾಗಪ್ಪ ಅಂಚಿಮನಿಯವರು ಡ್ರೈವರ್‌ನ ಎರಡೂ ಕೈಗಳನ್ನು ಕಟ್ಟಿ ಹಾಕಿ ಜೀಪಿಗೆ ಬೆಂಕಿ ಹಾಕಿದರು.[6] ಡ್ರೈವರ್ ಗಾಬರಿಗೊಂಡು ಬಂದು ಸಾಹೇಬರಿಗೆ ವಿಷಯವನ್ನು ತಿಳಿಸಿದರು. ಸಾಹೇಬರು ಈ ಅಪಮಾನದಿಂದ ದ್ವೇಷಕಾರಿದ ಸಾಹೇಬರು ತಿಗಡೊಳ್ಳಿ ಗ್ರಾಮದ ಜನತೆಗೆ ವಿವಿಧ ರೀತಿಯ ಹಿಂಸೆಗಳನ್ನು ನೀಡಿದರು ಆದರೆ ಯಾವುದೇ ಸುಳಿವು ನೀಡಲಿಲ್ಲ.

ಪುಣೆ–ಬೆಂಗಳೂರು ಹೆದ್ದಾರಿಯಲ್ಲಿ ಚಳುವಳಿಗಾರರು ವಿದ್ಯುತ್ ಕಂಬಗಳನ್ನು ನಾಶಪಡಿಸಿ ತಿಗಡೊಳ್ಳಿ, ದೇವರಶೀಗಿಹಳ್ಳಿ, ದೇಗೇಲೊಳ್ಳಿ, ಬೈಲೂರ, ಬೋಗೋರ, ಹುಲಿಕೊತ್ತಲ ಗ್ರಾಮಗಳಲ್ಲಿ ದಪ್ತರಗಳನ್ನು ಸುಟ್ಟು ಹಾಕಿ ಅಧಿಕಾರಿಗಳ ಆಯುಧಗಳನ್ನು ಕಸಿದು ಬೈಲೂರು ಮತ್ತು ದೇವರಶೀಗೆಹಳ್ಳಿಗಳಲ್ಲಿ ಸೇಂದಿ ಅಂಗಡಿಗಳನ್ನು ಸುಟ್ಟು ಹಾಕಿದರು. ಜಂಗಮ್ಮನ ಹಟ್ಟಿಯ ಸರ್ಕಾರಿ ಬಂಗಲೆಯನ್ನು ಸುಟ್ಟು ಹಾಕಿದರು. ಕೊನೆಗೆ ಸರ್ಕಾರ ಜಗದೇವಪ್ಪ ದುಗ್ಗಾಣಿಯವರನ್ನು ಹಿಡಿದು ಕೊಟ್ಟವರಿಗೆ ಬಹುಮಾನ ನೀಡುವುದಾಗಿ ಜಾಹೀರಾತು ಹೊರಡಿಸಿದರು. ಹೀಗೆ ಬೆಳಗಾವಿ ಜಿಲ್ಲೆಯಲ್ಲಿ ಬ್ರಿಟಿಷ್ ವಿರೋಧಿ ಚಟುವಟಿಕೆಗಳು ಬಹಳಷ್ಟು ಮಟ್ಟಿಗೆ ಸಂಭವಿಸಿದವು.

**ಪರಾಮರ್ಶನ ಗ್ರಂಥಗಳು**


- ಅಶ್ವತ್ಥನಾರಾಯಣ. (2021). ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ ಒಂದು ಅವಲೋಕನ. *ಇತಿಹಾಸ ದರ್ಪಣ*
- ಕುಲಕರ್ಣಿ, ಆರ್.ಎಚ್. (1992). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ.* ವೆಂಕಟೇಶ್ವರ ಪ್ರಕಾಶನ.


[6] ದೇಶಪಾಂಡೆ, ಬಾ.ಯಾ. (1992). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಂಪುಟ–1.* ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ.

- ನಾಗರತ್ನಮ್ಮ, ಎಸ್. (2009). *ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರಿಕ ಕಾನೂನು ಭಂಗ ಚಳುವಳಿ.* ದೇಶಿ ಪುಸ್ತಕ ಪ್ರಕಾಶನ.
- ದೇಶಪಾಂಡೆ, ಬಾ.ಯಾ. (1973). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ, ಸಂಪುಟ–1.* ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ.
- ಸೂರ್ಯನಾಥ್‌ಕಾಮತ್ ಮತ್ತು ದಾನಿ ಸುರೇಂದ್ರ. (1988). *ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು.*
- ಸಿದ್ದವ್ವನ ಹಳ್ಳಿ ಕೃಷ್ಣಶರ್ಮ. (1968). ಗಾಂಧೀ ಮತ್ತು ಕರ್ನಾಟಕ. ಗಾಂಧೀ ಸ್ಮಾರಕ ನಿಧಿ.